11	D' Kannada	162.10
12	Davanagere	100.80
13	Dharwad	62.54
14	Gadag	24.77
15	Gulbarga	94.68
16	Hassan	83.04
17	Haveri	50.05
18	Kodagu	44.84
19	Kolar	101.41
20	Koppal	45.01
21	Mandya	114.56
22	Mysore	186.49
23	Raichur	49.68
24	Shimoga	80.81
25	Tumkur	107.87
26	Udupi	95.26
27	U' Kannada	36.85
	Total	**4060.33**

1039 (1224) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ಯದ ಅಂಗಡಿಗಳು ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ನಿಗದಿಪಡಿಸಿದ ವ್ಯವಹಾರದ ಅವಧಿ ಏನು;

ಆ) ಅವರುಗಳು ನಿಯಮಗಳನ್ನು ಪಾಲಿಸುತ್ತಿದ್ದಾರೆಯೇ;

ಇ) ಕಾನೂನು ಉಲ್ಲಂಘಿಸಿದ ಮಾಲೀಕರ ವಿರುದ್ಧ ಎಷ್ಟು ಮೊಕದ್ದಮೆಗಳನ್ನು ದಾಖಲಿಸಲಾಗಿದೆ;

ಈ) ಕಾರ್ಮಿಕರ ಅನುಕೂಲಕ್ಕಾಗಿ ಮದ್ಯದಂಗಡಿಗಳನ್ನು ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಪಬ್‌ಗಳನ್ನು ತಿಂಗಳಿನಲ್ಲಿ ಒಂದು ದಿನ ಮುಚ್ಚುವ ನಿಟ್ಟಿನಲ್ಲಿ ಕಾನೂನನ್ನು ಜಾರಿಗೆ ತರುವ ಅಭಿಪ್ರಾಯವು ಸರ್ಕಾರಕ್ಕೆ ಇದೆಯೇ;

ಉ) ಇಲ್ಲದಿದ್ದಲ್ಲಿ ಸರ್ಕಾರವು ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಸಿಎಲ್–2 ಮತ್ತು ಸಿಎಲ್–9 ಗಳ ವ್ಯವಹಾರದ ವೇಳೆ :–

1. ಸಿಎಲ್–2 : ಬೆಳಗ್ಗೆ 10:00ರಿಂದ ರಾತ್ರಿ 10.30 ವರೆಗೆ

2. ಸಿಎಲ್–9 : ಬೆಳಗ್ಗೆ 10.00ರಿಂದ ರಾತ್ರಿ 11.30 ರವರೆಗೆ

ಆ) ಹೌದು. ನಿಯಮಗಳನ್ನು ಪಾಲಿಸದ ಸನ್ನದುದಾರರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಲಾಗುತ್ತಿದೆ.

ಇ) 2005–06ನೇ ಸಾಲಿನಲ್ಲಿ ಕಾನೂನು ಉಲ್ಲಂಘಿಸಿದ ಸಿಎಲ್–2 ಮತ್ತು ಸಿಎಲ್–9 ಸನ್ನದುದಾರರ ವಿರುದ್ಧ ಒಟ್ಟು 1142 ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ.

ಈ) ಇಲ್ಲ.

ಉ) ಸದ್ಯಕ್ಕೆ ಈ ದಿಸೆಯಲ್ಲಿ ಚಿಂತನೆ ಮಾಡಿರುವುದಿಲ್ಲ.

1041 (1263) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಯೋಜನಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಡಿಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಶಾಸಕರಿಗೆ ಅವರವರ ಕ್ಷೇತ್ರಗಳಿಗೆ ಉಪಯೋಗಿಸಿಕೊಳ್ಳುವ ಪ್ಯಾಕೇಜ್ ಪ್ರಸ್ತಾವನೆಯು ಸರ್ಕಾರದಲ್ಲಿದೆಯೆ;

ಆ) ಹಾಗಿದ್ದಲ್ಲಿ ಜನಸಂಖ್ಯಾ ಆಧಾರದ ಮೇಲೆ ಉಪಯೋಗಿಸಿಕೊಳ್ಳಲಾಗುತ್ತಿದೆಯೇ; (ವಿವರಣೆಯನ್ನು ಒದಗಿಸುವುದು)

ಇ) ಕುಡಿಯುವ ನೀರಿನ ಉದ್ದೇಶಕ್ಕಾಗಿ ವೆಚ್ಚ ಮಾಡಲು ಎಷ್ಟು ಹಣವನ್ನು ಪ್ರತಿ ಕ್ಷೇತ್ರಗಳಿಗೆ ಮೀಸಲಿಡಲಾಗಿದೆ;

ಈ) ಇಲ್ಲವಾದಲ್ಲಿ, ಸರ್ಕಾರವು ಗ್ರಾಮೀಣ ಜನತೆಯ ಸೌಲಭ್ಯಕ್ಕಾಗಿ ವಿಶೇಷ ಪ್ಯಾಕೇಜ್‌ನ್ನು ಏಕೆ ಅನುಷ್ಠಾನಗೊಳಿಸಿಲ್ಲ.

ಉ) ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಅದರಲ್ಲೂ ವಿಶೇಷವಾಗಿ ಕುಡಿಯುವ ನೀರಿನ ಉದ್ದೇಶಕ್ಕಾಗಿ, ಅವರವರ ಕ್ಷೇತ್ರಗಳಿಗೆ, ಅನುದಾನವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಸರ್ಕಾರ ತೆಗೆದುಕೊಂಡಿದೆಯೆ;

ಊ) ಇಲ್ಲವಾದಲ್ಲಿ, ಯಾವ ವ್ಯಾಪ್ತಿಯಲ್ಲಿ;

ಶ್ರೀ ರಾಮಚಂದ್ರ ಗೌಡ (ಯೋಜನಾ ಸಚಿವರು) :

ಅ) ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಕುಡಿಯುವ ನೀರಿನ ಸರಬರಾಜಿಗಾಗಿ ಯಾವುದೇ ಪ್ಯಾಕೇಜ್ ಈ ಯೋಜನೆಯಲ್ಲಿ ಇರುವುದಿಲ್ಲ.